ಸಹಾಯಕ ಶಿಕ್ಷಣ ಅಧಿಕಾರಿಗಳಿಗೆ ವಾಹನ ಸೌಲಭ್ಯವನ್ನೊದಗಿಸುವುದು

೧೧೩೧ ಶ್ರೀ ಶಿವಶೇಖರಪ್ಪ ಗೌಡ ಶಿರವಾಲ (ಶಹಾಪುರ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಎ) ತಾಲ್ಲೂಕು ಕೇಂದ್ರದಲ್ಲಿರುವ ಸಹಾಯಕ ಶಿಕ್ಷಣಾಧಿಕಾರಿಗಳು ತಾಲ್ಲೂಕಿನಲ್ಲಿರುವ ಶಾಲೆಗ ಗೆ ತಪ್ಪದೆ ತಪಾಸಣೆ ನಡೆಸಬೇಕಾಗಿರುವುದು ನಿಜವೇ ;

ಬಿ) ಗ್ರಾಮಾಂತರ ಪ್ರದೇಶಗಳಿಗೆ ಪ್ರವಾಸ ಕೈಗೊಳ್ಳಲು ನೀಡಿರುವ ಸೌಲಭ್ಯ ;

ಸಿ) ಮೇಲಿನ ಅಧಿಕಾರಿಗಳಿಗೆ ವಾಹನಗಳನ್ನು ದೊರಕಿಸುವ ಬಗ್ಗೆ ಸರ್ಕಾರದಲ್ಲಿನ್ನೇನಾದರೂ ಪ್ರಸ್ತಾವನೆ ಇದೆಯೇ ;

ಡಿ) ಹಾಗಿಲ್ಲದಿದ್ದಲ್ಲಿ ತಾಲ್ಲೂಕಿನ ಇತರೆ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿ ಸಹಾಯಕ ಶಿಕ್ಷಣಾಧಿಕಾರಿಗಳಿಗೆ ವಾಹನ ಸೌಲಭ್ಯ ಒದಗಿಸಲು ಸರ್ಕಾರವು ಪರಿಶೀಲಿಸುವುದೇ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಎ) ಹೌದು.

ಬಿ) ಸಹಾಯಕ ಶಿಕ್ಷಣಾಧಿಕಾರಿಗಳಿಗೆ ತಿಂಗಳಿಗೆ ರೂ. ೧೮೦ ನಿಗದಿತ ಪ್ರವಾಸ ಭತ್ಯವನ್ನು ನೀಡಲಾಗುತ್ತಿದೆ.

ಸಿ) ಇಲ್ಲ.

ಡಿ) ಸದ್ಯಕ್ಕೆ ಈ ಪ್ರಸ್ತಾವನೆ ಇಲ್ಲ.

ಶ್ರೀ ಎಂ. ವೀರಯ್ಯ ಸ್ವಾಮಿ (ಶ್ರೀ ಶಿವಶೇಖರಪ್ಪ ಗೌಡ ಶಿರವಾಲ್ ಅವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ಕೇಳುವ ಉದ್ದೇಶ ಏನೆಂದರೆ, ಹಳ್ಳಿಗಳಲ್ಲಿರುವ ಶಾಲೆಗಳಿಗೆ ನಿಯಮಿತವಾಗಿ ಶಿಕ್ಷಣ ಅಧಿಕಾರಿಗಳು ಭೇಟಿ ಕೊಟ್ಟರೆ ಮಾತ್ರ ಕ್ರಮಬದ್ಧವಾಗಿ ವಿದ್ಯಾಭ್ಯಾಸವನ್ನು ಮಕ್ಕಳಿಗೆ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಅನೇಕ ಹಳ್ಳಿಗಳಲ್ಲಿ ಏಕ ಕೋಣೆ ಇರತಕ್ಕಂಥ ಶಾಲೆಗಳಲ್ಲಿ ಮತ್ತು ಏಕ ಶಿಕ್ಷಕರು ಇರತಕ್ಕಂಥ ಶಾಲೆಗಳಲ್ಲಿ ಬಹಳಷ್ಟು ಗೈರು ಹಾಜರಾತಿಯಾಗುವುದಕ್ಕೆ ಇದೇ ಕಾರಣವಾಗುತ್ತಿದೆ. ಆಲ್ಲದೆ ಬಹಳ ವರ್ಷಗಳಿಂದ ಶಿಕ್ಷಣ ಅಧಿಕಾರಿಗಳ ಬೇಡಿಕೆಯೂ ಆಗಿದೆ. ಈ ಶಿಕ್ಷಣ ಸಂಸ್ಥೆಗಳ ಒಂದು ಒಳಿತಿಗಾಗಿ ಕನಿಷ್ಟ ಪಕ್ಷ ಅವರಿಗೆ ವಾಹನ ಓದಗಿಸುವುದು ಬಹಳ ಮುಖ್ಯವಾದ ವಿಷಯ. ಒಂದು ವೇಳೆ ಸರ್ಕಾರಕ್ಕೆ ಆ ರೀತಿ ಮಾಡಲು ಸಾಧ್ಯವಿಲ್ಲದೇ ಹೋದರೆ ಕನಿಷ್ಟ ಪಕ್ಷ ಆ ತಾಲ್ಲೂಕಿನಲ್ಲಿರುವ ಇತರ ಯಾವ ಅಧಿಕಾರಿಗಳ ಹತ್ತಿರ ವಾಹನ ಇರುತ್ತದೆಯೋ ಅವರ ಜೊತೆಯಲ್ಲಿ ವಾಹನ ಸೌಲಭ್ಯ ಕೊಡತಕ್ಕಂಥ ಅನುಕೂಲತೆ ಮಾಡಿಕೊಡುವುದರಲ್ಲಿ ಸರ್ಕಾರಕ್ಕೆ ಏನು ಸಮಸ್ಯೆ ಇದೆ ಎನ್ನುವುದನ್ನು ಹೇಳಬೇಕು.

ಶ್ರೀ ಡಿ. ಮಂಜುನಾಥ್.—ಈಗಾಗಲೇ ನಮ್ಮ ಅಧಿಕಾರಿಗಳಿಗೆ ಹೇಳಿದ್ದೇನೆ ಬೇರೆ ಅಧಿಕಾರಿಗಳ ವಾಹನವನ್ನು ಉಪಯೋಗಿಸಿಕೊಂಡು ಎಲ್ಲಾ ಕಡೆ ಹೋಗಬೇಕು ಎಂದು. ಅದು ಕಷ್ಟವಾಗಿದೆ. ಇವೊತ್ತು ತಾಲ್ಲೂಕಿನಲ್ಲಿರತಕ್ಕ ಬಿ.ಡಿ.ಓ., ತಹಶೀಲ್ದಾರ್ ಅವರಿಗೆಲ್ಲಾ ವಾಹನ ಇದೆ. ಆದರೆ ಶಿಕ್ಷಣ ಇಲಾಖೆಯ ಎ.ಇ.ಓ.ಗಳಿಗೆ ಪೆಹಿಕಲ್ ಇಲ್ಲ. ಇವರಿಗೆ ೧೦೦ ರೂಪಾಯಿಗಳ ಅಲೋಯನ್ಸ್ ಕೊಡುತ್ತಾ ಇದ್ದೇವೆ. ಈಗಾಗಲೇ ಇದರ ಬಗ್ಗೆ ವರ್ಕಪ್ ಕೂಡ ಮಾಡಿದ್ದೇವೆ. ಇನ್ಸ್‌ಪೆಕ್ಟರಿಗೆ ೫೦ ರೂಪಾಯಿಗಳನ್ನು ಕೊಡುತ್ತಿದೆ. ಇದು ಬಸ್ ಚಾರ್ಜಿಗೂ ಆಗುವುದಿಲ್ಲ. ಇದನ್ನು ರಿವೈಸ್ ಮಾಡಿ ಹೆಚ್ಚಿಗೆ ಕೊಡುವುದಕ್ಕೆ ನಾನು ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಪ್ರಪೋಸಲ್ಸ್ ಕಳಿಸಿದ್ದೇನೆ. ಬೇರೆ ಅಧಿಕಾರಿಗಳ ಜೊತೆ ಹೋಗಿರಿ ಎಂದು ಹೇಳಿದ್ದೇವೆ. ಹಣದ ಕೊರತೆ ಇರುವುದರಿಂದ ಹಿಂದಿನಿಂದಲೂ ಈ ರೀತಿ ನಡೆದುಕೊಂಡು ಬಂದಿದೆ. ಹಣ ಬಂದರೆ ಏನು ನೂರು ರೂಪಾಯಿ ಕೊಡುತ್ತಿದ್ದೇವೆ ಅದನ್ನಾದರೂ ಹೆಚ್ಚಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ವೀರಯ್ಯ ಸ್ವಾಮಿ.—ಅವರಿಗೆ ವಾಹನ ಕೊಡುವುದು ಉಚಿತ.

ಶ್ರೀ ಡಿ. ಮಂಜುನಾಥ್.—ಈಗಾಗಲೆ ಇದರ ಬಗ್ಗೆ ಯೋಚನೆ ಮಾಡಿದ್ದೇವೆ.

(೯೪೦ ಶ್ರೀ ವಿನಯ ಕುಮಾರ್ ಸೊರಕೆ.—ಮಾನ್ಯ ಸದಸ್ಯರು ಗೈರು ಹಾಜರಾಗಿದ್ದಾರೆ.)

ವರದಾ ನದಿಗೆ ಅಡ್ಡಲಾಗಿ ಹಾನಗಲ್ಲು ತಾಲ್ಲೂಕಿನಲ್ಲಿ ಸೇತುವೆಯ ನಿರ್ಮಾಣ

೧೧೭೭. ಶ್ರೀ ಸಿ. ಎಂ. ಉದಾಸಿ, (ಹಾನಗಲ್).—ಮಾನ್ಯ ಲೋಕೋಪಯೋಗಿ, ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವರದಾ ನದಿಗೆ ಹಾನಗಲ್ಲು ತಾಲ್ಲೂಕು ವೀರಾಪುರದ ಹತ್ತಿರ ಸೇತುವೆ ಕಟ್ಟಲು ೧೯೮೬-೮೭ನೇ ಸಾಲಿನ ಆಯವ್ಯಯದಲ್ಲಿ ಹಣ ಒದಗಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಸದರಿ ಕೆಲಸವನ್ನು ಈ ವರ್ಷವಾದರೂ ಪ್ರಾರಂಭಿಸಲಾಗುವುದೇ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಈ ಕೆಲಸವು ೧೯೮೬-೮೭ರ ಆಯವ್ಯಯದಲ್ಲಿ ೨೪ ಲಕ್ಷ ರೂ.ಗಳು ಅಂದಾಜಿಂ ಮತ್ತು ೮ ಲಕ್ಷ ರೂ.ಗಳ ಅನುದಾನದೊಂದಿಗೆ ಸೇರಿದೆ.

ಆ) ಮುಖ್ಯ ಇಂಜಿನಿಯರವರು ಈ ಕೆಲಸಕ್ಕೆ ೩೪.೫೯ ಲಕ್ಷ ರೂ.ಗಳ ಅಂದಾಜು ಪಟ್ಟಿಯನ್ನು ಕಳುಹಿಸಿಕೊಟ್ಟಿದ್ದರು. ಈ ಅಂದಾಜಿನಲ್ಲಿ ಕೂಡು ರಸ್ತೆ ಮತ್ತು ಮೋರಿ ಕೆಲಸಗಳನ್ನು ಸೇರಿಸದೆ ಇದ್ದಿದ್ದರಿಂದ ಎಲ್ಲವನ್ನು ಸೇರಿಸಿ ಅಂದಾಜು ಮಾಡಿ ಕಳುಹಿಸುವಂತೆ ಮುಖ್ಯ ಇಂಜಿನಿಯರ್‌ರವರಿಗೆ ವಾಪಸ್ಸು ಕಳುಹಿಸಲಾಗಿದೆ. ಅಂದಾಜಂ ಪಟ್ಟಿಯು ಬಂದ ಮೇಲೆ ಮುಂದಿನ ಕ್ರಮ ತೆಗೆದು ಕೊಳ್ಳಲಾಗುವುದು.

ಶ್ರೀ ಸಿ. ಎಂ. ಉದಾಸಿ.— ಕಳೆದ ಅನೇಕ ವರ್ಷಗಳಿಂದ ಸುಮಾರು ೩೫ ಹಳ್ಳಿಗಳವರಂ ವರದಾ ನದಿಗೆ ಸೇತುವೆಯನ್ನು ಕಟ್ಟಿಸುವಂತೆ ಬೇಡಿಕೆ ಇಟ್ಟಿದ್ದಾರೆ. ಈ ಪ್ರಾಜೆಕ್ಟ್ ಆಗದೇ ಇರುವುದರಿಂದ ಹಾನಗಲ್ಲಿನ ಸಂಪರ್ಕಕ್ಕೆ ತೊಂದರೆಯಾಗಿದೆ. ಇದಕ್ಕೆ ೨೦ ಲಕ್ಷ ರೂಪಾಯಿ ಅನುದಾನ ಸೇರಿದೆಯೆಂದು ಹೇಳಿದ್ದೀರಿ. ಆದುದರಿಂದ ಇದೇ ವರ್ಷದಲ್ಲಿ ಕೆಲಸ ಪ್ರಾರಂಭ ಮಾಡುವಂತೆ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.— ಅವರ ಒತ್ತಾಯದ ಮೇರೆಗೆ ಕೆಲಸ ಮಾಡುತ್ತಿದ್ದಾರೆ. ದುರ್ದೈವ ಏನೆಂದರೆ ಮೊದಲು ೨೫ ಲಕ್ಷ ರೂಪಾಯಿಗಳ ಅಂದಾಜು ಹಾಕಿಕೊಂಡು ಕೆಲಸ ತೆಗೆದು ಕೊಳ್ಳಲಿಕ್ಕೆ ಬೇಕಾದಾಗ ಸ್ಥಳೀಯ ಸನ್ನಿವೇಶಗಳನ್ನು ಪುನಃ ವಿಮರ್ಶಿಸಿದಾಗ, ಆ ಕಡೆ ಈ ಕಡೆ ಅಪ್ರೋಚ್ ಇಲ್ಲದಿದ್ದರೆ ಬ್ರಿಡ್ಜ್ ಕಟ್ಟಲಿಕ್ಕೆ ಸಾಧ್ಯವಿಲ್ಲ ಎಸ್ಟಿಮೇಟ್ ೩೦ ಲಕ್ಷ ರೂಪಾಯಿಗಳು ಜಾಸ್ತಿ ಯಾಗಿದೆ, ಬ್ರಿಡ್ಜ್ ಕಟ್ಟಲಿಕ್ಕೆ ಮಂಜೂರಾತಿ ಕೊಡಬೇಕೆನ್ನುವ ಆಸೆಯಿದೆ. ಅದು ಜಿಲ್ಲಾ-ಪರಿಷತ್ ವ್ಯಾಪ್ತಿಗೆ ಬರುತ್ತದೆ. ಸ್ಯಾಂಕ್ಷನ್ ಕೊಡದಿದ್ದರೆ ತೊಂದರೆಯಾಗಬಹುದೆನ್ನುವುದು ಸದಸ್ಯರ ಭಾವನೆಯಿದೆ. ಒಂದು ವಾರದಲ್ಲಿ ಆ ಬಗ್ಗೆ ನಿರ್ಣಯ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಸಿ. ಎಂ. ಉದಾಸಿ — ಅಡಿಗಲ್ಲು ಶಂಕುಸ್ಥಾಪನೆ ಮಾಡಿಸಿದ್ದರೆ ಸಮಸ್ಯೆ ಸುಧಾರಿಸುತ್ತಿತ್ತು. ಯಾವುದಾದರೂ ಕಾರಣದಿಂದ ಅದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ,— ಅಡಿಗಲ್ಲು ಸಮಾರಂಭದಿಂದ ಅದಕ್ಕೆ ಮುಕ್ತಿ ಸಿಗುತ್ತದೆ ಎಂದು ಹೇಳಿದರೆ ನಮ್ಮ ಅಧಿಕಾರಿಗಳಿಗೆ ಹೇಳುತ್ತೇನೆ, ನಿಮ್ಮ ಕೈಯಲ್ಲೆ ಅಡಿಗಲ್ಲು ಹಾಕಿಸಿ ಎಂದು ಹೇಳುತ್ತೇನೆ.